
“ಅದ್ವೈತವನ್ನು ಒಪ್ಪಿಕೊಂಡ ಮೇಲೆ ನಾನು–ನೀನು ಎನ್ನುವಂಥದ್ದು ಕಡಿದು ಹೋಗುವಂಥದ್ದು. ಒಂದು ಪರಮಾತ್ಮ ಮತ್ತು ಮನುಷ್ಯ ಒಂದಾಗುವ ನೆಲೆ ಅಂತಾದರೆ, ಯಾವುದೇ ಭಿನ್ನ–ಭೇದ ಇಲ್ಲ ಅಂತ ಒಪ್ಕೊಂಡಾಗ ಅದು ಸಾಮಾಜಿಕ ಅದ್ವೈತ ಆಯ್ತು. ಆದರೆ, ವೈದಿಕ ಒಪ್ಪಿಕೊಂಡ ಅದ್ವೈತ ಕೇವಲ ಭಾವಾದ್ವೈತವಾಗಿತ್ತೆ ಹೊರತು ಯಾವುದೇ ಕಾರಣಕ್ಕೂ ಅದು ಸಾಮಾಜಿಕ ಅದ್ವೈತವಾಗಿ ಪರಿವರ್ತನೆಯಾಗಲಿಲ್ಲ. ಆದರೆ, ವಚನ ಚಳವಳಿಯಾಗಲಿ ಅಥವಾ ನಮ್ಮ ಸ್ಥಳೀಯ ಅದ್ವಯಿಯಾದ ಶರೀಫನಂಥವರಾಗಲಿ ಅಥವಾ ದೇಸಿ ಅದ್ವಯಿ ಕೈವಾರ ನಾರಾಯಣ ತಾತನಂಥವರಾಗಲೀ ಸಾಮಾಜಿಕ ಅದ್ವೈತಕ್ಕೆ ಹೆಚ್ಚು ಒತ್ತುಕೊಟ್ಟರು” ಎಂದು ‘ವಚನಗಳ ಪ್ರಾಚೀನ ಪರಂಪರೆ’ ಎಂಬ ಲೇಖನದಲ್ಲಿ ಪ್ರಕಾಶ್ ದಾಖಲಿಸಿದ್ದಾರೆ. ಅವರ ಅನೇಕ ಬರಹ ಮತ್ತು ಭಾಷಣಗಳಲ್ಲಿ ಇಂತಹ ಒಳನೋಟಗಳಿರುವ ಅನೇಕ ಭಾಗಗಳಿವೆ.

‘ನುಡಿ ಸಂಕಥನ’ ಕೃತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ರೇಷ್ಮೆ ಹುಳುವಿನಂತೆ ಮಾಗುವ ಹಂತಕ್ಕೆ ಕನ್ನಡದ ಪ್ರಬುದ್ಧ ಮನಸ್ಸೊಂದು ಸಿದ್ಧಗೊಳ್ಳುತ್ತಿದ್ದ ರೀತಿ ಗೋಚರಿಸುತ್ತದೆ. ಎಚ್.ಎಸ್. ಶಿವಪ್ರಕಾಶ್ ಅವರ ಕಾವ್ಯ, ನಟರಾಜ್ ಹುಳಿಯಾರ್ ಅವರ ಕೃತಿಗಳು, ರಾಷ್ಟ್ರ–ರಾಷ್ಟ್ರೀಯತೆಗಳ ಮೇಲೆ ಗಂಗಾವತಿಯಲ್ಲಿ ಮಾಡಿದ ಭಾಷಣ ಹಾಗೂ ವಚನಗಳಲ್ಲಿನ ಪ್ರಾಚೀನ ಪರಂಪರೆಯ ಕುರಿತಾಗಿ ಕೊಳ್ಳೇಗಾಲದಲ್ಲಿ ಆಡಿದ ಮಾತುಗಳು, ಅಲ್ಲಮನ ಬಗೆಗಿನ ಒಳನೋಟಗಳು, ಭಕ್ತಿಯ ಕುರಿತಾದ ಬರಹ–ಭಾಷಣಗಳಲ್ಲಿ ಪ್ರಬುದ್ಧ ಚಿಂತಕನ ಚಹರೆ ಕಾಣಿಸುತ್ತದೆ. ಇಲ್ಲೆಲ್ಲ ಅವರ ವಿಮರ್ಶೆ ಪಡೆದುಕೊಳ್ಳುತ್ತಿದ್ದ ನಿಖರತೆ–ಪ್ರಖರತೆ ಹಾಗೂ ಚಿಂತನೆಯ ಹಲವು ಸೂಕ್ಷ್ಮಗಳು ಓದುಗರಿಗೆ ಗೋಚರಿಸುತ್ತವೆ.

ಜೀವಪರವಾದ ತಾತ್ತ್ವಿಕ ವಿಚಾರಗಳನ್ನು ಮಂಡಿಸಿದ ಲೋಕ ಚಿಂತಕರು ತಮ್ಮ ಯೋಚನೆಗಳನ್ನು ಸಮಾಜ, ಸಮುದಾಯಗಳ ಜೊತೆ ಜೋಡಿಸಿ, ಲೋಕದ ಸಮಸ್ಯೆಗಳಿಗೆ ನಿರಂತರವಾಗಿ ಮದ್ದು ಹುಡುಕುವ ಕೆಲಸ ಮಾಡಿದ್ದಾರೆ. ಭೂತ, ಭವಿಷ್ಯತ್ತುಗಳನ್ನು




ನುಡಿ ಸಂಕಥನ
ಪ್ರಕಾಶ್ ಬಡವನಹಳ್ಳಿ ಬರಹ ಮತ್ತು ಭಾಷಣಗಳು
ಸಂ: ಸುಕನ್ಯಾ ಎಸ್.ಓ.
ಪು: 412 ಬೆ: ₹ 375.
ಪ್ರ: ರೂಪ ಪ್ರಕಾಶನ, ಮೈಸೂರು
ಫೋನ್: 93422 74331

ವರ್ತಮಾನದಲ್ಲಿ ಏಕೀಭವಿಸಿ ನೋಡಿ ಸಮಾಜಮುಖಿಯಾಗಿ ಪ್ರತಿಕ್ರಿಯಿಸಿದ್ದಾರೆ. ಅವರ ಬರಹಗಳು ಮತ್ತು ಚಿಂತನೆಗಳು ಹೊಸದೊಂದು ಹಾದಿಯನ್ನು ತೆರೆದು ಓದುಗರಿಗೆ ತೋರಿಸುತ್ತವೆ. ಪ್ರಕಾಶ್, ‘ಲೋಕ ವಿಮರ್ಶಕರು ಸೂಕ್ಷ್ಮಮತಿಯಾದ ಸಾಹಿತ್ಯ ವಿಮರ್ಶಕರೂ ಆಗಿರಬಹುದು, ಆಗದಿರಬಹುದು, ಆದರೆ ಸಾಹಿತ್ಯ ವಿಮರ್ಶಕರು ಮಾತ್ರ ಲೋಕದ ವಿಮರ್ಶಕರಾಗಲೇಬೇಕು’ ಎನ್ನುತ್ತಾರೆ. ಇದರಿಂದಾಗಿಯೇ ಅವರ ಚಿಂತನೆಗಳಿಗೆ ತೀವ್ರವಾದ ಸಾಮಾಜಿಕ ಆಯಾಮ ದೊರಕಿದೆ.

ಪ್ರಕಾಶ್ ಅನೇಕ ಕಡೆ ವಿಮರ್ಶೆಯನ್ನು ಮೀಮಾಂಸೆಯ ತಾತ್ವಿಕ ಪರಿಧಿಗೆ ಏರಿಸಲು ಪ್ರಯತ್ನಿಸಿರುವುದು ಕಾಣಿಸುತ್ತದೆ. ಇದು ಡಿ.ಆರ್.